Size: 20x16 Job No.: 113/02

# ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನಂ.45, ಕೆ.ಎಸ್.ಹೆಚ್.ಡಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು - 560 001.
ಇ-ಮೇಲ್ : jddekshdc@gmail.com ವೆಬ್‌ಸೈಟ್ : http//www.cauverycrafts.com

ಸಂಖ್ಯೆ: ಕೆ.ಎಸ್.ಹೆಚ್.ಡಿ.ಸಿ/ಬೆಂ/ಗುರುಕುಲ/ಪ್ರಕಟಣೆ/102/2025–26 ದಿನಾಂಕ: 24.04.2025

## ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

# "ಶಿಲ್ಪಗುರುಕುಲ"

**ಶಿವಮೊಗ್ಗ ಜಿಲ್ಲೆಯ ಸಾಗರದ ಶ್ರೀಗಂಧದ ಕಲಾ ಸಂಕೀರ್ಣದಲ್ಲಿ ಕಲ್ಲು ಕೆತ್ತನೆ ಮತ್ತು ಮರದ ಕೆತ್ತನೆ ತರಬೇತಿ ಕೋರ್ಸ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**10 ತಿಂಗಳ ಸರ್ಟಿಫಿಕೇಟ್ ಕೋರ್ಸ್**
**ಕಲ್ಲು ಕೆತ್ತನೆ ಮತ್ತು ಮರದ ಕೆತ್ತನೆ**
**ಜುಲೈ -2025 ರಿಂದ ಏಪ್ರಿಲ್-2026 ರವರೆಗೆ**

**ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಮಾಸಿಕ ರೂ.1,500 ಶಿಷ್ಯ ವೇತನ ನೀಡಲಾಗುತ್ತದೆ.**

**ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ: 26-05-2025**

| | | |
|---|---|---|
| ವಿದ್ಯಾರ್ಹತೆ | : | ಕನಿಷ್ಠ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಕರಕುಶಲ ಕೆತ್ತನೆ ಚಟುವಟಿಕೆಗಳಲ್ಲಿ ಅಭಿರುಚಿ ಮತ್ತು ಆಸಕ್ತಿ ಹೊಂದಿರಬೇಕು. |
| ವಯೋಮಿತಿ | : | 16 ರಿಂದ 35 ವರ್ಷ [ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ] |
| ಸೌಲಭ್ಯಗಳು | : | ಊಟ, ವಸತಿ, ತರಬೇತಿ, ಸಮವಸ್ತ್ರ, ಶೈಕ್ಷಣಿಕ ಪ್ರವಾಸ, ಕೆತ್ತನೆಯ ಉಪಕರಣಗಳು ಇತ್ಯಾದಿಗಳನ್ನು ಉಚಿತವಾಗಿ ಒದಗಿಸಲಾಗುವುದು ಹಾಗೂ ಮಾಸಿಕ ರೂ.1,500/- ಶಿಷ್ಯ ವೇತನ ನೀಡಲಾಗುತ್ತದೆ. |

ಮೇಲ್ಕಂಡ 10 ತಿಂಗಳ ಅವಧಿಯ ತರಬೇತಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಉಚಿತವಾಗಿ ಶ್ರೀ ಗಣೇಶ್ ಸಿಂಗ್ ಪಿ. ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ/ಸೊರಬ/ ಶಿರಸಿ / ಕುಮಟ–ನಂ. 9945458941, ಶ್ರೀ ನಿಜಾಮುದೀನ್ ಯೋಜನಾಧಿಕಾರಿ, ಬಿದರಿ ಕಲಾ ಸಂಕೀರ್ಣ, ಬೀದರ್– ನಂ.9440088687, ಶ್ರೀ ಖಲೀಮುಲ್ಲಾ ಷರೀಫ್, ಯೋಜನಾಧಿಕಾರಿ, ಎಲ್.ಡಬ್ಲ್ಯೂ.ಸಿ.ಸಿ. ಚನ್ನಪಟ್ಟಣ / ರಾಮನಗರ ನಂ. 9945214618 ಶ್ರೀಮತಿ ಸೇವಂತಿ, ವ್ಯವಸ್ಥಾಪಕರು, ಎಂ.ಸಿ.ಸಿ. ಮೈಸೂರು, ನಂ. 8197728284, ಶ್ರೀ ಹರೀಶ್, ಯೋಜನಾಧಿಕಾರಿ, ಬಹು ಕಲಾ ಸಂಕೀರ್ಣ, ಬೆಂಗಳೂರು / ಶಿವಾರಪಟ್ಟಣ ನಂ. 9844271975 ಶ್ರೀ ರಮೇಶ್, ಯೋಜನಾಧಿಕಾರಿ, ನವಲಗುಂದ / ಮುಂಡಗೋಡು / ಕಿನ್ನಾಳ ನಂ. 9845689142 ಇವರಿಂದ ಹಾಗೂ ನಿಗಮದ ವೆಬ್‌ಸೈಟ್ http://www.cauverycrafts.com ಮೂಲಕ ಅರ್ಜಿಗಳನ್ನು ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ದಾಖಲಾತಿ ಪ್ರತಿಗಳೊಂದಿಗೆ ದಿನಾಂಕ: 26–05–2025 ರೊಳಗೆ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಕೆಳದಿ ರಸ್ತೆ, ಸಾಗರ–577 401 ಶಿವಮೊಗ್ಗ ಜಿಲ್ಲೆ ಹಾಗೂ ಪ್ರಧಾನ ವ್ಯವಸ್ಥಾಪಕರು (ಅಭಿವೃದ್ಧಿ), ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ, ನಂ.45, ಕೆ.ಎಸ್.ಹೆಚ್.ಡಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು – 560 001. ಇವರಿಗೆ ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ದಿನಾಂಕ: 26–05–2025 ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ ಇವರನ್ನು ಮೊಬೈಲ್ ಸಂಖ್ಯೆ: 9945458941 ಮುಖಾಂತರ ಸಂಪರ್ಕಿಸಬಹುದಾಗಿದೆ.

**ವಿಶೇಷ ಸೂಚನೆ:–ಸದರಿ ತರಬೇತಿಗೆ ಗರಿಷ್ಠ 30 ಅಭ್ಯರ್ಥಿಗಳನ್ನು ತೆಗೆದುಕೊಳ್ಳಬಹುದಾಗಿದ್ದು, ಅದರಲ್ಲಿ ಆರು (06) ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಎರಡು(02) ಅಭ್ಯರ್ಥಿಗಳು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಯಮಾನುಸಾರ ಮೀಸಲಿರಿಸಲಾಗಿದೆ.**

ಸಹಿ/– ವ್ಯವಸ್ಥಾಪಕ ನಿರ್ದೇಶಕರು